ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ತುಮಕೂರಿನ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳನ್ನು ಪರಿಶೀಲನೆ ಮಾಡಿ ನೋಡಿದಾಗ, ಯಾವ ಹಾಸ್ಟೆಲ್‌ನಲ್ಲೂ ಬಿಲ್ಡಿಂಗ್, ಉಡುಪು ಮತ್ತು ಊಟಗಳ ಪರಿಸ್ಥಿತಿ ನೋಡಿದಾಗ ಇದು ಡೆಮಾಕ್ರಸಿಯಲ್ಲ, ನಿಜವಾಗಿ ಜನಕ್ಕೆ ಏನೂ ಅನುಕೂಲ ಸಿಗುತ್ತಿಲ್ಲ, ಆ ಜನಾಂಗದ ವಿದ್ಯಾರ್ಥಿಗಳನ್ನು ನೋಡಿದಾಗ ಅಯ್ಯೋ ಅನ್ನಿಸುತ್ತದೆ. ತುಮಕೂರಿನ ಈ ಇಲಾಖೆಯ ಅಧಿಕಾರಿಗಳು ಕಳೆದ 6 ವರ್ಷದಲ್ಲಿ ಒಂದು ದಿನವಾದರೂ ಕೂಡ ಒಂದು ಹಾಸ್ಟೆಲಿಗೆ ಭೇಟಿ ಕೊಟ್ಟು ತನಿಖೆ ಮಾಡಿದ್ದನ್ನು ನಾವು ಕಾಣೆವು. ಆ ಇಲಾಖೆ ಅಲ್ಲಿ ಇದೆಯೋ ಇಲ್ಲವೋ ಗೊತ್ತಿಲ್ಲ. ಮಾನ್ಯ ಸಚಿವರು ಕೂಡಲೇ ಈ ಬಗ್ಗೆ ಗಮನಹರಿಸಿ ಆ ಹಾಸ್ಟೆಲ್‌ಗಳಲ್ಲಿ ಇರತಕ್ಕ ಮಕ್ಕಳಿಗೆ ಸರಿಯಾದ ಆಹಾರ, ಉಡುಪು ಸಿಗುವಂತೆ ವ್ಯವಸ್ಥೆ ಮಾಡಬೇಕು. ಸರ್ಕಾರ ಕೊಡುತ್ತಿರುವುದುರಲ್ಲಿ ಅವರಿಗೆ 10 ಪರ್ಸೆಂಟೂ ಸಿಗುತ್ತಿಲ್ಲ. ಈ ತುಮಕೂರು ಜಿಲ್ಲೆ ಅದರಲ್ಲೂ ಕೊರಟಗೆರೆ ತಾಲ್ಲೂಕಿನಲ್ಲಿ ಈ ವಿಚಾರದಲ್ಲಿ ಭಾರಿ ಅನ್ಯಾಯವಾಗಿದೆ. ಆದ್ದರಿಂದ ಕೂಡಲೇ ಮಾನ್ಯ ಸಚಿವರು ಈ ಬಗ್ಗೆ ಗಮನಹರಿಸಬೇಕೆಂದು ನಾನು ವಿನಂತಿಸುತ್ತೇನೆ. ಮತ್ತೆ ನಮ್ಮ ತಾಲ್ಲೂಕು ನೀರಾವರಿಯಿಲ್ಲದ್ದು, ಹಾಗೇ ಮಧುಗಿರಿ, ಶಿರಾ ತಾಲ್ಲೂಕುಗಳೂ ಸಹ ಅಲ್ಲಿ ಇನ್ನೂ ಮೂರು ಹೊಸ ಹಾಸ್ಟೆಲ್‌ಗಳನ್ನು ತೆರೆಯಬೇಕೆಂದು ನಾವು ಮನವಿ ಸಲ್ಲಿಸಿದ್ದೇವೆ. ದಯಮಾಡಿ ಈ ವರ್ಷದ ಬಜೆಟ್‌ನಲ್ಲಿ ಇವನ್ನು ನಮ್ಮ ತಾಲ್ಲೂಕಿನ ಲೆಕ್ಕಕ್ಕೆ ಸೇರಿಸಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಶ್ರೀ ಬಾಬುರಾವ್ ಚವಾಣ್ : ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಈಗಾಗಲೇ ಉತ್ತರ ಒದಗಿಸಲಾಗಿದೆ. ಅವರು ಅಲ್ಲಿ ಹಾಸ್ಟೆಲ್ಸ್ ಸರಿಯಾಗಿ ನಡೆಯುತ್ತಿಲ್ಲವೆಂದು ದೂರು ಹೇಳಿದ್ದಾರೆ. ಅದರ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ. ಅದರ ಜೊತೆಗೆ ಹೊಸ ಹಾಸ್ಟೆಲಿಗಾಗಿ ಅವರು ಕಳಿಸಿರುವ ಪ್ರಪೋಸಲ್‌ಗಳನ್ನು ಸರ್ಕಾರ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಹಾಗೇ ಇವತ್ತಿನದು 4ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 74 ಪ್ರಶ್ನೆಗಳ ಪೈಕಿ 35 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

ಸರ್ಕಾರಿ ವಿದ್ಯಾರ್ಥಿನಿಲಯದ ಸಿಬ್ಬಂದಿ ವರ್ಗದವರ ಸಂಬಳ

365 - ಶ್ರೀ ಅಂಜನ ಮೂರ್ತಿ (ನೆಲಮಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರದಲ್ಲಿ ಅನುದಾನ ಪಡೆಯುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ ತಿಂಗಳ ವೇತನ ಕಡಿಮೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?